ದಿನಾಂಕಃ 29-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ವೈ ಎಂ ಆರ್ ವಕೀಲರಿಂದ</u>**

1. ಈ ದಾವೆಯ ವಾದಿ ನನ್ನ ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ವಾದಿ ನನ್ನ ಅತ್ತೆಯ ಮಗ. ವಾದಿ ಸಲ್ಲಿಸಿರುವ ದಾವೆಯನ್ನು ನಾನು ತಿಳಿದುಕೊಂಡಿರುತ್ತೇನೆ. ದಾವಾಸ್ತಿ ಖಾತೆ ಸುಮಾರು ನಂ 404/ಡಿ ಯ ಕ್ರಯಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಕ್ರಯಪತ್ರವನ್ನು ನಾನು ನೋಡಿಲ್ಲದ ಕಾರಣ ಸದರಿ ಆಸ್ತಿಯ ವಿಸ್ತೀರ್ಣ, ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ಈ ದಾವೆ ಸದರಿ ಕ್ರಯಪತ್ರದ ಕುರಿತು ಹೂಡಿದ ನಂತರ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರ ಎಂದರೆ ಸಾಕ್ಷಿ ಪ್ರಯತ್ನಪಟ್ಟಿರುತ್ತೇನೆ ಎಂದು ನುಡಿಯುತ್ತಾರೆ, ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಅಂಶಗಳು ಸುಳ್ಳು ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿ ನಮೂದಿಸಿರುವ ಆಸ್ತಿಯ ವಿವರಗಳು ಮತ್ತು ಅದರ ಮಾಲೀಕರ ಕುರಿತು ನಾನು ತಿಳಿದುಕೊಂಡಿರುತ್ತೇನೆ. ಅದರಂತೆ ನಿಪಿ-1 ರಂತೆ ದಿಃ 30-10-1964ರಲ್ಲಿ ಗೌಡ್ರ ಹನುಮಂತಪ್ಪ ಬಿನ್ ಗೌಡ್ರ ತಿಮ್ಮಯ್ಯ ಎನ್ನುವವರು ಶ್ರೀ ಹಂಚಿನ ನಾಗಪ್ಪ ಬಿನ್ ಹಂಚಿನಮನೆ ಉಜ್ಜಯ್ಯನವರಿಂದ ದಾವಾಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಿಪಿ-1 ನಾನು ಹುಟ್ಟುವ ಮುನ್ನ ಆಗಿರುವ ಕಾರಣ ಸದರಿ ದಾಖಲೆಯ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನನ್ನ ಪ್ರಸ್ತುತ ವಾಸವಿರುವ ಮನೆಯಲ್ಲಿಯೇ ನನ್ನ ಪೂರ್ವಜರೂ ಸಹ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1ರ ಕುರಿತು ನನ್ನಹಿರಿಯರು ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲ. ಗೌಡ್ರ ಹನುಮಂತಪ್ಪನವರು ಜೀವಂತವಿಲ್ಲ ಎಂದರೆ ಸರಿ. ಸದರಿಯವರಿಗೆ ಬಸಪ್ಪಗೌಡ ಎನ್ನುವ ಒಬ್ಬ ಮಗನಿದ್ದು ಆತನೂ ಸಹ 17-04-2001ರಲ್ಲಿ ಮೃತಪಟ್ಟಿರುತ್ತಾನೆ ಎಂದರೆ ಸಾಕಿ ನಿರ್ದಿಷ್ಟ ದಿನಾಂಕ ಗೊತ್ತಿಲ್ಲ ಆತನೂ ಸಹ ಮೃತಪಟ್ಟಿರುತ್ತಾನೆ ಎಂದು ನುಡಿಯುತ್ತಾರೆ.

2. ಈ ದಾವೆಯ ವಾದಿ ಸದರಿ ಬಸಪ್ಪ ಗೌಡನ ಮಗ ಎಂದರೆ ಸರಿ. ಹಾಗಾಗಿ ದಾವಾಸ್ತಿಯನ್ನು ವಾದಿ ಅವರ ಕುಟುಂಬದ ತಂದೆ ಮತ್ತು ಅಜ್ಜ ಮೃತಪಟ್ಟ ಕಾರಣ ಅವರ ವಾರಸುದಾರರಾಗಿ ಖಾತಾದಾರರಾಗಿ ಅನುಭವಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ 404/ಡಿ ಆಸ್ತಿಗೆ ಸಂತೆಬೆನ್ನೂರು ಪಂಚಾಯತಿಯಲ್ಲಿ 818/404 ಎಂದು ಡಿ ಸಿ ಬಿ ರಿಜಿಸ್ಟರ್ ನಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ.

3. ಸದರಿ 404/ಡಿ ಯ ಆಸ್ತಿ ನನ್ನ ಅಜ್ಜನಾದ ಚೆನ್ನಬಸಪ್ಪನ ಹೆಸರಿನಾಗಲಿ ನನ್ನ ತಂದೆ ಜಯಪ್ಪನ ಹೆಸರಿನಲ್ಲಾಗಲಿ ನೊಂದಾಯಿತ ದಾಖಲೆ ಇದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಗೆ ತಕರಾರನ್ನು ಸಲ್ಲಿಸಲು ಮಾಹಿತಿಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸದರಿ ತಕರಾರನ್ನು ಸಲ್ಲಿಸುವ ಸಮಯಕ್ಕೆ ನಮ್ಮ ವಕೀಲರಿಗೆ ದಾವಾಸ್ತಿಗೆ ಸಂಬಂಧಿಸಿದ ಯಾವ ನೊಂದಾಯಿತ ದಾಖಲೆಗಳನ್ನು ಕೊಟ್ಟಿದ್ದೀರ ಎಂದರೆ ಸಾಕ್ಷಿ ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಹಳೆಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಮೊದಲ ಬಾರಿಗೆ ಯಾವ ವರ್ಷಕ್ಕೆ ಸಂಬಂಧಿಸಿದೆ ಎಂದರೆ ಸಾಕ್ಷಿ 1970 ರಿಂದ ನಮಗೆ ದಾಖಲೆ ದೊರಕಿದ್ದು ಅದಕ್ಕೂ ಹಿಂದಿನದಾಖಲೆಗಳು ದೊರೆತಿಲ್ಲ ಎಂದು ನುಡಿಯುತ್ತಾರೆ. 1970ರಲ್ಲಿ ಯಾವ ದಾಖಲೆ ದೊರೆತಿದೆ ಎಂದರೆ ಸಾಕ್ಷಿ ಡಿಸಿಬಿ ರಿಜಿಸ್ಟರ್ ನ ಎಕ್ಸ್ ಟ್ರಾಕ್ಟ್ ದೊರೆತಿದೆ ಎಂದು ನುಡಿಯುತ್ತಾರೆ. ಸದರಿ ಡಿಸಿಬಿ ರಿಜಿಸ್ಟರ್ ನ ಎಕ್ಸ್ ಟ್ರಾಕ್ಟ್ ನ್ನು ಯಾವ ದಾಖಲೆಯಾಧಾರದ ಮೇಲೆ ನಮೂದಿಸಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಡಿಸಿಬಿ ರಿಜಿಸ್ಟರ್ ನ ಎಕ್ಸ್ ಟ್ರಾಕ್ಟ್ ನಲ್ಲಿ ಆಸ್ತಿಯ ಸಂಖ್ಯೆ, ವಿಸ್ತೀರ್ಣ ಮತ್ತು ಚೆಕ್ಕುಬಂದಿ ನಮೂದು ಇದೆಯೇ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಗಳಲ್ಲಿ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಇಲ್ಲದಿರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ.

( ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.